**ಇಂದು ದಿನಾಂಕಃ 20-05-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾರ್ಟೀ ಸವಾಲು ಆರೋಪಿ ಪರವಾಗಿ ಶ್ರೀ ಬಿ.ಎಸ್. ವಕೀಲರಿಂದಃ-**

ನಮ್ಮ ಕಛೇರಿಯ ದಕ್ಷಿಣ ದಿಕ್ಕಿಗೆ ನಮ್ಮ ಕಛೇರಿಗೆ ಹತ್ತಿಕೊಂಡು ಕುಂಚಾವರಂ ಪೋಲಿಸ ಠಾಣೆ ಇದೆ ಎಂದರೆ ಸರಿ. ನಮ್ಮ ಕಛೇರಿ ಹಾಗೂ ಕುಂಚಾವರಂ ಪೋಲಿಸ ಠಾಣೆ ಬೇರೆ ಬೇರೆ ಇದೆ ಎಂದರೆ ಸರಿ. ಕುಂಚಾವರಂ ಗ್ರಾಮದಲ್ಲಿ 4000 ದಿಂದ 5000 ಜನರು ವಾಸಿಸುತ್ತಾರೆ ಎಂದರೆ ಸರಿ. ಸಾರ್ವಜನಿಕರಿಗೆ ಹಾಗೂ ಪೋಲಿಸರಿಗೆ ಪಂಚರಾಗಲೂ ಕೇಳಿದ್ದೇವೆ ಎಂದು ತೋರಿಸಲು ಯಾವುದೇ ದಾಖಲೆಯಲ್ಲಿ ಉಲ್ಲೇಖವಿಲ್ಲ ಎಂದರೆ ನೆನಪಿಲ್ಲ. ನನ್ನ ಹೇಳಿಕೆಯಲ್ಲಿರುವ ಸಂಗತಿಗಳು ನನಗೆ

ನೆನಪಿದೆ. ನನ್ನ ಹೇಳಿಕೆಯಲ್ಲಿ ಸಾರ್ವಜನಿಕರಿಗೆ ಹಾಗೂ ಪೋಲಿಸರಿಗೆ ಪಂಚರಾಗಲೂ ಕೇಳಿದ ಬಗ್ಗೆ ಉಲ್ಲೇಖವಿಲ್ಲ ಎಂದರೆ ಸರಿಯಲ್ಲ. ಸಾರ್ವಜನಿಕರು ಬರೆದ ಇದ್ದಾಗ ಪೋಲಿಸರಿಗೆ ಪಂಚರಾಗಲೂ ಕೇಳಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಪೋಲಿಸರಿಗೆ ಅಥವಾ ಸಾರ್ವಜನಿಕರಿಗೆ ಪಂಚರಾಗಲೂ ಕೇಳಿದರೆ ಸತ್ಯಾಂಶ ಹೊರಗೆ ಬರುತ್ತದೆ ಎಂದು ತಿಳಿದು ಅವರಿಗೆ ಪಂಚರಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಕೃತ್ಯ ಮಾಡದೇ ಇದ್ದರು ಸಹ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಆರೋಪಿ ಕೂಲಿ ಕೆಲಸ ಮಾಡುತ್ತಾನೆ ಎಂದರೆ ಸಾಕ್ಷಿ ವನ್ಯ ಪ್ರಾಣಿಗಳನ್ನು ಬೇಟೆಯಾಡುವ ಕೆಲಸ ಮಾಡುತ್ತಾನೆ ಎಂದು ನುಡಿಯುತ್ತಾರೆ. ಆರೋಪಿಯ ಮೇಲೆ ಬೇರೆ ಎಷ್ಟು ಪ್ರಕರಣಗಳು ದಾಖಲೆಯಾಗಿದ್ದಾವೆ ಎಂದು ನನಗೆ ಗೊತ್ತಿಲ್ಲ. ನೈಕಿ ನಾರಾಯಣರವರ ಜಮೀನಿನಲ್ಲಿ ಆರೋಪಿ ಕೆಲಸ ಮಾಡುತ್ತಿದ್ದು ಆರೋಪಿ ಅರಣ್ಯ ಪ್ರದೇಶದಿಂದಲೇ ಸದರಿ ಜಮೀನಿಗೆ ಹೋಗಬೇಕಾಗುತ್ತದೆ ಎಂದರೆ ಸರಿ. ನೈಕಿ ನಾರಾಯಣ ಹತ್ತಿರ ಆರೋಪಿ ಕೆಲಸ ಮಾಡುತ್ತಿದ್ದು ಯಾವುದೇ ಕೃತ್ಯ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಆರೋಪಿ ವನ್ಯ ಪ್ರಾಣಿಗಳನ್ನು ಬೇಟೆಯಾಡುತ್ತಾ ಬಂದಿರುತ್ತಾನೆ ಎಂದು ನುಡಿಯುತ್ತಾರೆ.

ಬೋನಸಪುರಕ್ಕೆ ಮತ್ತು ಘಟನ ಸ್ಥಳಕ್ಕೆ ಅಂದಾಜು 2 ಕಿ.ಮೀ. ಅಂತರವಿದೆ. ಕುಂಚಾವರಂದಿಂದ ಬೋನಸಪುರ 4 ಕಿ.ಮೀ. ದೂರದಲ್ಲಿ ಇದೆ ಎಂದರೆ ಸರಿ. ನಮ್ಮ ಕಛೇರಿಯಿಂದ ಘಟನ ಸ್ದಳ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ನೆನಪಿಲ್ಲ. ನಾನು 2020ರಲ್ಲಿ ಕುಂಚಾವರಂ ಕಛೇರಿಯಿಂದ ವರ್ಗಾವಣೆಯಾಗಿದ್ದೇನೆ. ನಮ್ಮ ಠಾಣೆಯಿಂದ ಘಟನ ಸ್ಥಳ ಅಂದಾಜು 4.5 ಕಿ.ಮೀ. ದೂರವಿದೆ. ಆರೋಪಿಯ ಪರಿಚಯ ನನಗೆ ಇರುವುದಿಲ್ಲ. ನಾನು ಘಟನ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಕಛೇರಿಯಲ್ಲಿ ಕುಳಿತು ಎಲ್ಲಾ ದಾಖಲೆಗಳನ್ನು ಸೃಷ್ಟಿಸಿದ ಕಾರಣ ಗುನ್ನೆ ಸ್ಥಳ ನಮ್ಮ ಕಛೇರಿಯ ಯಾವ ದಿಕ್ಕಿಗೆ ಇದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಪೆಂಗೋಲಿನ್ ಪ್ರಾಣಿಯನ್ನು ಹಿಡಿದುಕೊಂಡು ಹೋಗುತ್ತಿರುವ ಬಗ್ಗೆ ಸುಳ್ಳು ನುಡಿದಿದ್ದೇನೆ ಎಂದರೆ ಸರಿಯಲ್ಲ. ಚಾಸಾ-3 ರವರ ಮಾತು ಕೇಳಿ ಆರೋಪಿ ನೈಕಿ ನಾರಾಯಣರವರ ಜಮೀನಿಗೆ ಅರಣ್ಯ ಪ್ರದೇಶದಿಂದ ಹೋಗುವ ಕಾರಣಕ್ಕಾಗಿ ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯ ಊರು ಮತ್ತು ಚಾಸಾ-3 ರವರ ಊರು ಬೇರೆ ಬೇರೆ ಇದೆ ಎಂದರೆ ಸಾಕ್ಷಿ

ಅವರ ಊರು ನಾನು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ.

ಪಂಚನಾಮೆಯ ಸಂಗತಿಗಳನ್ನು ನಾನು ಓದಿದ್ದೇನೆ. ನನ್ನ ಜೊತೆ ಇದ್ದ ಇನ್ನೊಬ್ಬ ಪಂಚ ಪ್ರಾಸಾ-1 ರವರು ಇದ್ದಾರೆ. ಸಾಕ್ಷಿಗೆ ಮರು ಪ್ರಶ್ನಿಸಿದಾಗ ಚಾಸಾ-3 ರವರು ನನ್ನ ಜೊತೆ ಪಂಚರಾಗಿದ್ದರು ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ಚಾಸಾ-3 ರವರ ಊರು ಯಾವುದು ಇದೆ ಎಂದು ನಮೂದು ಇದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಅರಣ್ಯ ರಕ್ಷಕರವರು ಬರೆದಿದ್ದರು ಹಾಗೂ ಅದರ ಮೇಲೆ ನಾನು ಸಹಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಅರಣ್ಯ ರಕ್ಷಕ ಯಾರು ಎಂದು ನನಗೆ ನೆನಪಿಲ್ಲ. ಠಾಣೆಯಲ್ಲಿ ಕುಳಿತು ದಾಖಲೆಗಳನ್ನು ಸೃಷ್ಟಿಸಿದ ಕಾರಣ ಅರಣ್ಯ ರಕ್ಷಕರು ಯಾರು ಎಂದು ನೆನಪು ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಹತ್ತಿರ ಯಾವುದೇ ಪೆಂಗೋಲಿನ ಪ್ರಾಣಿ ಇರಲಿಲ್ಲ ಮತ್ತು ಆರೋಪಿಯನ್ನು ನಾವು ಹಿಡಿದಿರಲಿಲ್ಲ ಆರೋಪಿಗೆ ಸತಾಯಿಸಲು ಸುಳ್ಳು ಪಂಚನಾಮೆಯನ್ನು ಮಾಡಿ ಅದರ ಅನುಗುಣವಾಗಿ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**